**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ** 10006/23

ಪಿಡಬ್ಲೂ- 1

**ಪ್ರಮಾಣ ವಚನ ಭೋದಿಸಿದ ದಿನಾಂಕಃ** 13-06-2025.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ</u>**

ಆರೋಪಿತರು ನಮ್ಮ ಪಕ್ಕದ ಮನೆಯ ವಾಸಿಗಳು ಎಂದರೆ ಸರಿ. ನಮ್ಮ ಮನೆ ಬೀದಿಯಲ್ಲಿ 2 ಸಾಲಿನಲ್ಲಿ ಮನೆಗಳು ಇರುತ್ತವೆ ಎಂದರೆ ಸರಿ. ನಮ್ಮ ಮನೆಯ ಹಿತ್ತಲ ಕಡೆ ಮನೆಗಳು ಇರುವುದಿಲ್ಲ. ನಮ್ಮ ಮನೆಯ ಹಿತ್ತಲಿನಲ್ಲಿ ಯಾವುದೇ ದಾರಿ ಇಲ್ಲ. ನನ್ನ ಮತ್ತು ಆರೋಪಿತರ ನಡುವೆ ಜಾಗದ ವಿಚಾರದಲ್ಲಿ ದ್ವೇಷ ಇರುತ್ತದೆ. ನಾವು ನಮ್ಮ ಜಾಗದಲ್ಲಿ ಬೋರ್ ನ್ನು ಕೊರೆಸಿದಾಗ ಆರೋಪಿತರು ಸದರಿ ಜಾಗ ನಮ್ಮದು ಅದರಲ್ಲಿ ಏಕೆ ಬೋರ್ ಕೊರಿಸಿದ್ದೀರಾ ಎಂದು ಜಗಳ ಮಾಡಿದರು. ಸುಮಾರು 4-5 ವರ್ಷದ ಹಿಂದೆ ಸದರಿ ಜಗಳ ಆಗಿರುತ್ತದೆ. ನಾವು ಮನೆ ಕಟ್ಟಿರುವ ಜಾಗ ಸರ್ಕಾರದಿಂದ ಮಂಜೂರಾತಿ ಆಗಿರುವುದಿಲ್ಲ, ನಾವು ಹಾಗೆ ಮನೆ ಕಟ್ಟಿರುತ್ತೇವೆ.

ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ನನ್ನ ತಂದೆ, ತಾಯಿ ವಾಸ ಮಾಡುತ್ತೇವೆ. ನನ್ನ ತಮ್ಮ ಮಂಡ್ಯಾದಲ್ಲಿ ವಾಸ ಮಾಡುತ್ತಿದ್ದಾನೆ. ನನ್ನ ತಮ್ಮನ ಹೆಸರು ಶ್ರೀಧರ್ ಎಲ್

(ಚಾಸಾ4). ಚಾಸಾ2 ಮತ್ತು ಚಾಸಾ3 ನನ್ನ ತಂದೆ, ತಾಯಿ ಎಂದರೆ ಸರಿ. ಚಾಸಾ 6 ನನ್ನ ಚಿಕ್ಕಪ್ಪ. ಚಾಸಾ5 ಆರೋಪಿಯ ಮನೆಯ ಪಕ್ಕದ ಮನೆಯವರು.

ನಾನು ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಆರೋಪಿತರು ವ್ಯವಸಾಯ ಮತ್ತು ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಮ್ಮ ಮನೆಯ ಹತ್ತಿರ ಸಾಕಷ್ಟು ಜನ ಓಡಾಡುತ್ತಿರುತ್ತಾರೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಯಾವುದೇ ಕೃತ್ಯ ನಡೆದಿರುವುದಿಲ್ಲ ಮತ್ತು ಆರೋಪಿತರು ನನ್ನ ತಾಯಿಯನ್ನುದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ದೈಹಿಕವಾಗಿ ನಾನು ಆರೋಪಿತರಿಗಿಂತ ಬಲವಾಗಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಅರುಣನೇ ಮೊದಲು ನನಗೆ ಕೈಯಿಂದ ಹೊಡೆದಿರುತ್ತಾನೆ. ಆ ಸಮಯದಲ್ಲಿ ನಾನು, ನನ್ನ ತಾಯಿ ಮತ್ತು 1 ನೇ ಆರೋಪಿ ಅರುಣ ಮಾತ್ರ ಇದ್ದೆವು. 2 ನೇ ಆರೋಪಿ ನಾವು ನಿಂತಿದ್ದ ಸ್ಥಳದಿಂದ ಸುಮಾರು 10 ಅಡಿ ದೂರದಲ್ಲಿ ಇದ್ದರು. ನನ್ನ ತಂದೆ ಸಹ ಸುಮಾರು 10 ಅಡಿ ದೂರದಲ್ಲಿ ಇದ್ದರು. ಆ ಸಮಯದಲ್ಲಿ ನನ್ನ ತಂದೆಯವರು ನನ್ನ ಬಳಿಗೆ ಗಲಾಟೆ ಬಿಡಿಸಲು ಬಂದರು. ಆ ದಿವಸ 2 ನೇ ಆರೋಪಿ ನನಗೆ ಹೊಡೆದಿರುವುದಿಲ್ಲ ಎಂದರೆ ಸರಿ. ಆರೋಪಿತರು ನನಗಾಗಲೀ, ನನ್ನ ತಂದೆಯವರಿಗಾಗಲೀ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮು ಮಾ 4 ಸಾಮಾನ್ಯವಾಗಿ ಎಲ್ಲಾ ರೈತರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ಮು ಮಾ 4 ನ್ನು ಆ ದಿವಸ ಕೃತ್ಯಕ್ಕೆ ಬಳಸಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾ 4 ನ್ನು ನನ್ನ ತಂದೆಯವರು ಘಟನೆ ನಡೆದ ಮಾರನೇ ದಿವಸ ತನಿಖಾಧಿಕಾರಿಗಳಿಗೆ ಕೊಟ್ಟಿರುತ್ತಾರೆ. ಮು ಮಾ 4 ಘಟನೆ ನಡೆದ ಸ್ಥಳದಲ್ಲಿ ಬಿದ್ದಿತ್ತು. ಘಟನೆ ನಡೆದ ಸ್ಥಳ ಬಯಲು ಪ್ರದೇಶ ಎಂದರೆ ಸರಿ. ಮು ಮಾ 4 ಆಯುಧದಿಂದಲೇ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದ್ದರು ಎಂದು ಹೇಳಲು ನಾನು ಯಾವುದೇ ವಿಶೇಷವಾದ ಗುರುತನ್ನು ಇಟ್ಟುಕೊಂಡಿರುವುದಿಲ್ಲ. ಮು ಮಾ 4 ನ್ನು ನನ್ನ ತಂದೆಯವರು ತನಿಖಾಧಿಕಾರಿಯವರಿಗೆ ಕೊಟ್ಟಾಗ ನಾನು ಇರಲಿಲ್ಲ.

ಈ ಕೃತ್ಯಕ್ಕೆ ಸಂಬಂಧಪಟ್ಟಂತೆ ನಾನು ಪೋಲೀಸ್ ಠಾಣೆಗೆ ಒಂದು ಬಾರಿ ಅಂದರೆ ದಿನಾಂಕಃ 14-03-2022 ರಂದು ಭೇಟಿ ನೀಡಿರುತ್ತೇನೆ. ಪೋಲೀಸರು ಸಂಜೆ 5-30 ಗಂಟೆಗೆ ನನ್ನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ತೆಗೆದುಕೊಂಡಿರುತ್ತಾರೆ. ದಿನಾಂಕಃ 14-03-2022 ರಂದು ಪೋಲೀಸರು ನನಗೆ ಬೆಳಿಗ್ಗೆ ಕರೆ ಮಾಡಿ ಪೋಲೀಸ್ ಠಾಣೆಗೆ ಬರಲು ಹೇಳಿದರು. ಪೋಲೀಸರು ನನಗೆ ನೀವು ಠಾಣೆಗೆ ಬರಬೇಕಾದರೆ ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆ, ಟೋಪಿ ಮತ್ತು ನಿಮ್ಮ ತಂದೆಯವರು ಧರಿಸಿದ್ದ ಬಟ್ಟೆಗಳನ್ನು ತೆಗೆದುಕೊಂಡು ಬನ್ನಿ ಎಂದು ತಿಳಿಸಿದರು. ಪೋಲೀಸ್ ಠಾಣೆಗೆ ನನ್ನ ತಂದೆಯವರು ಸಹ ನನ್ನ ಜೊತೆ ಬಂದಿದ್ದರು. ದಿನಾಂಕಃ 07-03-2022 ರಂದು ನಾನು ಸಾಗರದಲ್ಲಿರುವ

ಅಶ್ವಿನಿ ಕ್ಲಿನಿಕ್ ಗೆ ಭೇಟಿ ಮಾಡಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅದಾದನಂತರ ನಾನು ಸೊರಬ ಆಸ್ಪತ್ರೆಗೆ ಹೋಗಿರುವುದಿಲ್ಲ.



ಘಟನೆಯಾದ ದಿವಸ ನಾನು ಮು ಮಾ 1 - ಟೋಪಿ, ಮು ಮಾ 2 ತುಂಬು ತೋಳಿನ ಶರ್ಟ್ ಅನ್ನು ನಾನು ಧರಿಸಿರಲಿಲ್ಲ, ಮು ಮಾ - 3 ಅರ್ಧ ತೋಳಿನ ಶರ್ಟ್ ನ್ನು ನನ್ನ ತಂದೆಯವರು ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರು ನನ್ನ ಹೇಳಿಕೆ ತೆಗೆದುಕೊಂಡ ಸಂದರ್ಭದಲ್ಲಿ ನಾನು ಮತ್ತು ನನ್ನ ತಂದೆ ಇಬ್ಬರೂ ಸೊರಬ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆವು ಎಂದರೆ ಸರಿ. ಪೋಲೀಸರು ನನ್ನ ಹೇಳಿಕೆ ಪಡೆದುಕೊಳ್ಳುವ ಸಂದರ್ಭದಲ್ಲಿ ನಾನು ಟೋಪಿಯನ್ನು ಪೋಲೀಸರಿಗೆ ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಸೊರಬ ಆಸ್ಪತ್ರೆಯಿಂದ ಬಂದ ನಂತರ ಸಾಗರದ ಅಶ್ವಿನಿ ಕ್ಲಿನಿಕ್ ಗೆ ಭೇಟಿ ನೀಡಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಅಶ್ವಿನಿ ಕ್ಲಿನಿಕ್ ಸಾಗರದಲ್ಲಿ ಎಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಶ್ವಿನಿ ಕ್ಲಿನಿಕ್ ನಲ್ಲಿ ನನಗೆ ಚಿಕಿತ್ಸೆ ನೀಡಿದ ವೈಧ್ಯರ ಹೆಸರು ಗೊತ್ತಿಲ್ಲ. ಅಶ್ವಿನಿ ಕ್ಲಿನಿಕ್ ಗೆ ನನ್ನ ಜೊತೆ ನನ್ನ ತಮ್ಮ ಮತ್ತು ನನ್ನ ಭಾವ ಬಂದಿದ್ದರು.

ನಾನು ಅಶ್ವಿನಿ ಕ್ಲಿನಿಕ್ ಗೆ ಭೇಟಿ ಮಾಡಿ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ, ನಾನು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದನ್ನು ಹೊರತುಪಡಿಸಿ ಬೇರೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಆರೋಪಿತರ ಮೇಲೆ ದ್ವೇಷ ಇದ್ದಿದ್ದರಿಂದ

ಯಾವುದೇ ಘಟನೆ ನಡೆಯದೇ ಇದ್ದರೂ ಸಹ ನಾನು ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

–9–

ನಾನು ಬಿ.ಕಾಂ., ವ್ಯಾಸಂಗ ಮಾಡಿರುತ್ತೇನೆ. ನಮ್ಮ ಊರಿನಿಂದ ಸೊರಬಗೆ 4 ಕಿ. ಮೀ. ಆಗುತ್ತದೆ. ನನ್ನ ತಮ್ಮ ಆರ್ಕಿಟೆಕ್ಟ್ ಆಗಿರುತ್ತಾನೆ. ನನ್ನ ತಮ್ಮ ಡಿಪ್ಲೋಮಾ (ಸಿವಿಲ್) ವ್ಯಾಸಂಗ ಮಾಡಿರುತ್ತಾನೆ. ನನ್ನ ತಮ್ಮ ಡಿಪ್ಲೋಮಾ ವನ್ನು ಸಿದ್ದಾಪುರ ಕಾಲೇಜಿನಲ್ಲಿ ಮಾಡಿರುತ್ತಾನೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).